ಆ) ಮಿನಿ ವಿಧಾನಸೌಧ ನಿರ್ಮಾಣಕ್ಕಾಗಿ ಜಮೀನು ಗುರುತಿಸಲಾಗಿದೆಯೇ ; (ವಿವರ ನೀಡುವುದು) ;

ಇ) ಈ ಕಟ್ಟಡ ಕಾಮಗಾರಿಗೆ ನಿಗದಿಪಡಿಸಿದ ಅನುದಾನದ ಮೊತ್ತ ಹಾಗೂ ನಿಗದಿಪಡಿಸಿರುವ ಕಾಲಮಿತಿ ಏನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಮಿನಿ ವಿಧಾನಸೌಧದ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಹೌದು. ಬೆಳ್ತಂಗಡಿ ತಾಲ್ಲೂಕು ಸರ್ವೆ ನಂ. 91/1 ಎ2 ಎ1 ಎರಲ್ಲಿ 2.66 ಎಕರೆ ಜಮೀನನ್ನು ಈ ಕಾಮಗಾರಿಗೆ ಗುರುತಿಸಲಾಗಿದೆ.

ಇ) ಸಂಪನ್ಮೂಲಗಳ ವ್ಯವಸ್ಥೆ ಆಗುತ್ತಲೆ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುವುದು.

823 (579) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಮಂಜೂರು ಮಾಡಿದ ಹಾಗೂ ಮಾಡಬೇಕಾಗಿರುವ ಪ್ರಕರಣಗಳು ಎಷ್ಟು ; (ಪ್ರಕರಣವಾರು ಮತ್ತು ವರ್ಷವಾರು ಮಾಹಿತಿ ನೀಡುವುದು) ;

ಆ) ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಮಂಜೂರಾತಿ ನೀಡಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) 1969 ರಿಂದ 2000ದ ವರೆಗೆ ಸಾರ್ವಜನಿಕ ಉದ್ದೇಶಕ್ಕೆ ಮಂಜೂರಾತಿ ಮಾಡಿದ ಮತ್ತು ಭೂಮಿ ಕಾದಿರಿಸಿದ ಪ್ರಕರಣಗಳು ಒಟ್ಟು 810.

2003 ರಿಂದ 2006ರ ವರೆಗೆ ಸಾರ್ವಜನಿಕ ಉದ್ದೇಶಕ್ಕೆ ಭೂ ಮಂಜೂರಾತಿ ಮಾಡಲು ಬಾಕಿಯಿರುವ ಪ್ರಕರಣಗಳ ಸಂಖ್ಯೆ: 59.

ಆ) 1964ರ ಕರ್ನಾಟಕ ಲ್ಯಾಂಡ್ ರೆವೆನ್ಯೂ ಆಕ್ಟ್ ಸೆಕ್ಷನ್ 71ರಂತೆ ಸಾರ್ವಜನಿಕ ಉದ್ದೇಶಕ್ಕೆ ಅರ್ಹ ಪ್ರಕರಣಗಳಲ್ಲಿ ಸ್ಥಳ ಕಾದಿರಿಸುತ್ತದೆ. ಮತ್ತು 1969ನೇ ಕರ್ನಾಟಕ ಭೂ ಮಂಜೂರಾತಿ ನಿಯಮಗಳಡಿ ಅರ್ಹ ಪ್ರಕರಣಗಳಲ್ಲಿ ಜಮೀನು ಲಭ್ಯತೆ ಹಾಗೂ ಅರ್ಹತೆಗೆ ಅನುಗುಣವಾಗಿ ಭೂ ಮಂಜೂರಾತಿ ಮಾಡಲಾಗುತ್ತಿದೆ.